ಅಪವಾದಗಳನ್ನು ಹೊತ್ತು ಬದುಕುವುದಕ್ಕಿಂತ ಸಾಯುವುದೇ ಲೇಸು.”

“ಎಂಥಾ ಮಾತು ಅಂತ ಆಡ್ತೀಯಾ! ಇದಕ್ಕೆಲ್ಲ ತಲೆಕೆಡಿಸ್ಕೊಳ್ಳಬೇಡ. ಸುಬ್ಬು ಹೇಳಿದ ವಿಷಯ ಕಾಕತಾಳೀಯವಿರಬಹುದು” ಎಂದು ಸೂರ್ಯಾಂಶ್ ಹೇಳಿದ.

ಅದಕ್ಕೆ ಪ್ರಭಾತ, “ಸುಬ್ರಮಣಿಯ ಅಪ್ಪ ಸ್ವಲ್ಪ ಕದಿಯುವ ಬುದ್ಧಿಯವನೇ ಅಂತ ನಮ್ಮಪ್ಪ ಹೇಳುತ್ತಿದ್ದ. ಅವನ ಮಾತಿಗೆಲ್ಲ ಕಿವಿಕೊಟ್ಟು ನೀ ಹೀಗೆ ಕುಳಿತಿರುವುದು ಸರಿಯಾ?”

“ಸರಿಯೋ ತಪ್ಪೋ? ಅದೆಲ್ಲ ನಂಗೊತ್ತಿಲ್ಲ. ನನಗೆ ಹುಚ್ಚು ಹಿಡಿದಂತಾಗಿದೆ. ಅದೇನೋ ಕೃಷ್ಣ ಶಮಂತಕಮಣಿ ಹುಡುಕಿ ತಂದ ಕತೆಯಿದೆಯಂತೆ, ಅದನ್ನು ಕೇಳುವುದು ಇದಕ್ಕೆ ಪರಿಹಾರವಂತೆ. ನಿಮಗೆ ಗೊತ್ತಾ?”

“ನಾನು ಚಿಕ್ಕವನಿದ್ದಾಗ ಆ ಕತೆಯ ಭಕ್ತಿಗೀತೆ ಕೇಳಿದ್ದೆ. ಈಗ ಪೂರ್ತಿ ನೆನಪಿಲ್ಲ” ಎಂದು ಪ್ರಭಾತ ಹೇಳಿದ್ದಕ್ಕೆ ಸೂರ್ಯಾಂಶ್, “ಪ್ರಭಾತ ನೆನಪಿಸಿಕೊಂಡು ಹೇಳೋ... ಅಪೂರ್ವನ ಪರಿಸ್ಥಿತಿ ನನ್ನಿಂದ ನೋಡಕಾಗಲ್ಲ” ಎಂದ.

ತುಂಬಾ ಹೊತ್ತು ನೆನಪಿಸಿಕೊಳ್ಳಲು ಪ್ರಯತ್ನ ಮಾಡಿದ ಬಳಿಕ “ಹಾಂ... ನೆನಪಾಯ್ತು” ಎಂದಾಗ ಅವರಿಬ್ಬರು ಸಂತಸದಿಂದ ಪ್ರಭಾತ ಹೇಳುವುದನ್ನೇ ಕಿವಿಕಣ್ಣಗಲಿಸಿ ಅವನತ್ತವೇ ನೋಡುತ್ತಿದ್ದಂತೆ ಪ್ರಭಾತನು, “ಈ ಕತೆ ಕೇಳಲು ದೊರೆವುದು ಜನತೆಗೆ ದೋಷದ ಪರಿಹಾರ...” ಅಂತ ಅದು ಕೊನೆಯಾಗುತ್ತದೆ. ಅಷ್ಟೆ ನನಗೆ ನೆನಪಿಗೆ ಬರ್ತಾ ಇರೋದು ಎಂದಾಗ ಅಪೂರ್ವನಿಗೆ ಬೇಸರವಾಯಿತು.

“ಅಪೂರ್ವ ಯೋಚನೆ ಮಾಡಬೇಡ ಯುಗಾದಿ ಚಂದ್ರನನ್ನು ನೋಡಿದರಾಯಿತು... ಹೀಗೆಲ್ಲ ಮಾತು ನಿಲ್ಲಿಸಿ ಹುಚ್ಚನಂತಾಗಬೇಡ.” ಎಂದು ಪ್ರಭಾತ ಸಮಾಧಾನ ಮಾಡಿದ.

“ಇನ್ನೂ ತುಂಬಾ ದಿನ ಇದೆ ಯುಗಾದಿಗೆ. ಅಷ್ಟರೊಳಗೆ ನನ್ನ ಮೇಲೆ ಅಪವಾದ ಬಂದುಬಿಟ್ಟರೆ, ಸುಬ್ಬುವಿನ ಅಪ್ಪನಂತೆ ನಾನೂ ಜೈಲಿಗೆ ಹೋಗಬೇಕಾಗಿ ಬಂದರೆ...”

ಈಗ ಸೂರ್ಯಾಂಶನಿಗೆ ತಾಳ್ಮೆ ತಪ್ಪಿತು “ಎಂಥಾ... ಅಪವಾದ ? ಮತ್ತೇನು ಬರುವುದಿಲ್ಲವೆ? ಆ ಸುಬ್ಬ, ಅನಕ್ಷರಸ್ಥ ಹೇಳಿದಾ ಅಂತ ನೀನು ಈ ರೀತಿ ಆಡುವುದೇ? ಹೆಗ್ಗಡೆಯವರ ಮನೆಯ ಕೋಣವನ್ನು ಕದಿಯಲು ಅವುಗಳು ನಿರ್ಜೀವ ವಸ್ತುವೇನು? ಅವನಪ್ಪ ಕದ್ದದ್ದು ಎಂದು ಹೇಳಿದವರಿಗೆ ಬುದ್ಧಿ ಇರಲಿಲ್ಲ ಅಷ್ಟೆ. ಎಲ್ಲ ಕಾಕತಾಳೀಯ ಗೊತ್ತಾಯ್ತಾ? ಇನ್ನಾದರೂ ಆ ಬಗ್ಗೆ ಯೋಚಿಸದೆ ಮೊದಲಿನಂತಾಗು” ಎಂದು ಕಟುವಾಗಿ ಹೇಳಿಬಿಟ್ಟ.

ಪ್ರಭಾತನಿಗೆ ಸೂರ್ಯಾಂಶ್ ಇಷ್ಟೊಂದು ಕಠೋರವಾಗಿ ಮಾತನಾಡಿದ್ದು ಹಾಗೂ ಸುಬ್ಬುವನ್ನು ಅನಕ್ಷರಸ್ಥ ಎಂದಿದ್ದು ಸರಿಕಾಣಲಿಲ್ಲ. “ಸೂರ್ಯಾಂಶ್, ಇರಲಿ ಬಿಡು, ಅವರವರ ನಂಬಿಕೆ ಅವರವರಿಗೆ. ಆದರೆ ಸುಬ್ಬು ಅನಕ್ಷರಸ್ಥನಲ್ಲ. ಅವರ ಮನೆಯಲ್ಲಿ ಆಗ ಮುಂದೆ ಓದಿಸಿದ್ದರೆ ಈಗ ನಮಗಿಂತಲೂ ಮೇಲಿನ ಹುದ್ದೆಯಲ್ಲಿರುತ್ತಿದ್ದ. ಬಡವರು ಪಾಪ. ಆದರೂ ಆತ ನಮ್ಮಂತೆ ಮಹಾನಗರದ ದೊಡ್ಡ ಕಂಪನಿಯಲ್ಲಿ ಕೆಲಸ ಮಾಡುವುದಿಲ್ಲ ಬಿಟ್ಟರೆ ನಮಗಿಂತ ಹೆಚ್ಚು ದುಡಿಯುತ್ತಾನೆ. ಅದು ಮಾತ್ರ ನಿಜ. ಅಪೂರ್ವ, ನೀನು ಚಿಂತಿಸಬೇಡ. ಏನೂ ತೊಂದರೆಯಾಗದು. ಯುಗಾದಿಚಂದ್ರನನ್ನು ನೋಡುವತನಕ ಸ್ವಲ್ಪ ಹುಷಾರಾಗಿರು, ಅಷ್ಟೆ” ಎಂದಾಗ ಸೂರ್ಯಾಂಶನಿಗೆ ತಾನು ಸ್ವಲ್ಪ ದುಡುಕಿದೆ ಎನಿಸಿತು.

“ಸುಬ್ಬುವಿನ ಬಗ್ಗೆ ಹಾಗೆ ಹೇಳಿದ್ದಕ್ಕೆ ಸಾರಿ... ಆದರೆ ಅಂಥ ನಂಬಿಕೆಗಳನ್ನೆಲ್ಲ ತಲೆಯಲ್ಲಿಟ್ಟುಕೊಂಡು ಈ ರೀತಿ ಹೆದರಿ ಕುಳಿತಿರುವುದು ಸರಿಯಲ್ಲವೇ ಅಲ್ಲ. ಮುಂದಿನ ಚೌತಿಯಲ್ಲಿ